**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್.ಸಿ.ನಂ. 5002/2025**

**ಸಿ.ಡಬ್ಲ್ಯೂ:-1 ಪಿ.ಡಬ್ಲ್ಯೂ:-1**

**ದಿಃ 03.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

| | | |
|---|---|---|
| ಪೂರ್ಣ ಹೆಸರು | : | ಸೈಫಅಲಿ ಶೇರಲಿ ನಗಾರ್ಜಿ |
| ವಯಸ್ಸು | : | 24 ವರ್ಷ. |
| ಉದ್ಯೋಗ | : | ಫ್ಯಾಬ್ರಿಕೇಶನ ಕೆಲಸ |
| ವಾಸಸ್ಥಳ | : | ನಿಪ್ಪಾಣಿ |

**ಮುಖ್ಯ ವಿಚಾರಣೆಃ-** ಮಾನ್ಯ ಸರಕಾರಿ ಅಭಿಯೋಜಕರವರಿಂದಃ-

1) ಚಾ.ಸಾ.17 ಶೇರಲಿ ನನ್ನ ತಂದೆ. ಚಾ.ಸಾ.12 ರಿಂದ 16 ನನ್ನ ಗೆಳೆಯರು. ಮೃತ ಅಶ್ರಫಅಲಿ ನನ್ನ ತಮ್ಮ. ನ್ಯಾಯಾಲಯದ ಮುಂದೆ ವಿ.ಸಿ. ಮುಖಾಂತರ ಹಾಗೂ ಪ್ರತ್ಯಕ್ಷವಾಗಿ ಹಾಜರಿರುವ ಆರೋಪಿತರನ್ನು ಈ ಮೊದಲು ನೋಡಿಲ್ಲ.

2) ಅಶ್ರಫಅಲಿ ಈಗ್ಗೆ ಒಂದೂವರೆ ವರ್ಷದ ಹಿಂದೆ ನಿಪ್ಪಾಣಿಯ ಬೀಮ ನಗರದಲ್ಲಿ ಯಾರೋ ಕೊಲೆ ಮಾಡಿದ್ದರಿಂದ ಮೃತಪಟ್ಟಿದ್ದಾನೆ. ಆತನ ಸಾವಿಗೆ ಯಾರು ಕಾರಣ ಅಂತಾ ಗೊತ್ತಿಲ್ಲ. ಆರೋಪಿತರು ಆತನನ್ನು ಕೊಲೆ ಮಾಡಿಲ್ಲ. ಆರೋಪಿತರು ಹಾಗೂ ನಮ್ಮ ಮದ್ಯೆ ಹಳೆಯ ದ್ವೇಷ ಯಾವುದು ಇರಲಿಲ್ಲ. ಆರೋಪಿತರು ನಮ್ಮ ಮೇಲೆ ಯಾವುದೇ ಕಾಲಕ್ಕೂ ವೈರತ್ವ ಸಾಧಿಸುತ್ತಿರಲಿಲ್ಲ.

3) ಒಂದೂವರೆ ವರ್ಷದ ಹಿಂದೆ ರಾತ್ರಿ 08.30 ಗಂಟೆ ಸುಮಾರಿಗೆ ನನ್ನ ತಮ್ಮ ಅಶ್ರಫಅಲಿಗೆ ಬೀಮ ನಗರದಲ್ಲಿ ಯಾರೋ ಹೊಡೆದಿದ್ದಾರೆ ಅಂತಾ ಗೊತ್ತಾಗಿ ಹೋಗಿ ನೋಡಿದಾಗ ಆತನ ತಲೆಗೆ, ಮೈಕೈ ಮೇಲೆ ಗಾಯಗಳಾಗಿದ್ದವು. ನನ್ನ ತಮ್ಮ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ನಂತರ ನನ್ನ ತಂದೆಯನ್ನು ಕರೆಸಿಕೊಂಡು ಸಂಬಂಧಿಕರ ಕೂಡ ಅಲ್ಲಿಗೆ ಬಂದರು. ನನ್ನ ತಮ್ಮನನ್ನು ನಿಪ್ಪಾಣಿ ಸರ್ಕಾರಿ ಆಸ್ಪತ್ರೆಗೆ, ಹೆಚ್ಚಿನ ಚಿಕಿತ್ಸೆಗೆ ಕೊಲಾಪೂರ C. P. R. ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದೆವು. ರಾತ್ರಿ 10.30 ಗಂಟೆ ಸುಮಾರಿಗೆ ಚಿಕಿತ್ಸೆ ಫಲಿಸದೇ ನನ್ನ ತಮ್ಮ ಮೃತಪಟ್ಟಿದ್ದಾಗಿ ನನ್ನ ತಂದೆ ನನಗೆ ಪೋನ ಮಾಡಿ ತಿಳಿಸಿದ್ದರಿಂದ ನಾನು ನಿಪ್ಪಾಣಿಯ ಶಹರ ಪೋಲಿಸ ಠಾಣೆಗೆ ಹೋಗಿ ವಿಷಯ ತಿಳಿಸಿದೆ. ಪೋಲಿಸರ ಕೋರಿಕೆಯಂತೆ ಸಹಿ ಮಾಡಿದೆ. ಸಾಕ್ಷಿಗೆ ದೂರು ಹಾಗೂ ತನ್ನ ಸಹಿ ತೋರಿಸಲಾಗಿ, ಸಾಕ್ಷಿ ನೋಡಿ ಗುರುತಿಸಿದ್ದು, ದೂರನ್ನು ನಿ.ಪಿ 1 ಹಾಗೂ ಸಾಕ್ಷಿ ಸಹಿಯನ್ನು ನಿ.ಪಿ.1 (ಎ) ಅಂತಾ ಗುರುತಿಸಲಾಯಿತು. ಅದರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ಪೋಲಿಸರ ಕೋರಿಕೆಯಂತೆ ಅವರು ಹೇಳಿದಂತೆ ಬರೆದು ಸಹಿ ಮಾಡಿಕೊಟ್ಟಿದ್ದೇನೆ. ನಂತರ ಠಾಣೆಗೆ ಹೋಗಿಲ್ಲ ಹಾಗೂ ಮರುಹೇಳಿಕೆಗಳನ್ನು ನೀಡಿಲ್ಲ. ಸಾಕ್ಷಿಗೆ ಬಿ. ಎನ್. ಎಸ್. ಕಲಂ 183 ನೇದ್ದರ ಕೆಳಗೆ ದಾಖಲಿಸಿಕೊಂಡ ಹೇಳಿಕೆ ತೋರಿಸಲಾಗಿ, ತನ್ನ ಸಹಿ ನೋಡಿ ಒಪ್ಪಿ ಕೊಂಡಿದ್ದು, ಸದರಿ ದಾಖಲೆಯನ್ನು ನಿ.ಪಿ.2, ಸಾಕ್ಷಿ ಸಹಿಯನ್ನು ನಿ.ಪಿ.2(ಎ) ಅಂತಾ ಗುರುತಿಸಲಾಯಿತು. ಅದರಲ್ಲಿ ಬರೆದ ವಿಚಾರ ಗೊತ್ತಿಲ್ಲ. ಪೋಲಿಸರು ಹೇಳಿದಂತೆ ನ್ಯಾಯಾಧೀಶರ ಮುಂದೆ ಹೇಳಿದ್ದೇನೆ.

4) ಘಟನೆಗೆ ಸಂಬಂಧಿಸಿದಂತೆ ನನ್ನ ತಮ್ಮ ಗಾಯಗೊಂಡು ಬಿದ್ದ ಸ್ಥಳವನ್ನು ಪೋಲಿಸರಿಗೆ ತೋರಿಸಿಲ್ಲ. ಸಾಕ್ಷಿಗೆ 6 ಪೋಟೋಗಳನ್ನು ತೋರಿಸಲಾಗಿ ಅವುಗಳನ್ನು ಯಾರು, ಎಲ್ಲಿ ಯಾವ ವಿಚಾರವಾಗಿ ತೆಗೆದಿದ್ದಾರೆಂದು

ಗೊತ್ತಿಲ್ಲವಾಗಿ ನುಡಿದಿದ್ದು, ಅವುಗಳನ್ನು ಸಾಂಕೇತಿಕವಾಗಿ ನಿ.ಪಿ.3 ರಿಂದ 8 ಅಂತಾ ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಬೇಕೆಂದು ಮಾನ್ಯ ಸರಕಾರಿ ಅಭಿಯೋಜಕರು ಕೋರಿದ್ದು, ಪರಿಶೀಲಿಸಿ, ಅನುಮತಿಸಲಾಯಿತು)**

**ಪಾಟೀ ಸವಾಲುಃ– ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

1) ಚಾ.ಸಾ.22 ಆಯಾನ ಎಕ್ಸಂಬಿ ನನ್ನ ಗೆಳೆಯ ಎಂದರೆ ಸರಿ. ದಿನಾಂಕಃ 22.10.2024 ರಂದು ಚಾ.ಸಾ.22 ರವರ ಜನ್ಮ ದಿನ ಇತ್ತು ಎಂದರೆ ಸರಿಯಲ್ಲ. ಆ ದಿನ ನಾನು, ನನ್ನ ತಮ್ಮ ಹಾಗೂ ನನ್ನ ಗೆಳೆಯರಾದ ಚಾ.ಸಾ.12 ರಿಂದ 16 ರವರ ಕೂಡಿಕೊಂಡು ನಿಪ್ಪಾಣಿಯ ಬೀಮ ನಗರದಲ್ಲಿರುವ ಮುನಸಿಪಲ ಶಾಲೆಯ ಹಿಂದಿನ ಬದಿಯಲ್ಲಿರುವ ಜಲಕುಂಭದ ಕಟ್ಟೆಯ ಮೇಲೆ ಕೇಕ್ ಕತ್ತರಿಸುವ ಕಾರ್ಯಕ್ರಮ ಇಟ್ಟುಕೊಂಡು ಅಲ್ಲಿ ಸೇರಿದ್ದೇವು ಎಂದರೆ ಸರಿಯಲ್ಲ. ಅಲ್ಲಿಗೆ ಆಯಾನ್ ಇನ್ನೂ ಬಂದಿರಲಿಲ್ಲ ಎಂದರೆ ಸರಿಯಲ್ಲ. ಆಗ ಆರೋಪಿತರೆಲ್ಲ ತಮ್ಮ ಕೈಯಲ್ಲಿ ನನಗೀಗ ತೋರಿಸಿದ ಮಚ್ಚು, ತಲವಾರಗಳು, ಗುಪ್ತಿ ಆಯುಧವನ್ನು ಹಿಡಿದುಕೊಂಡು ನಮ್ಮ ಮೇಲೆ ಹಲ್ಲೆ ಮಾಡಲು ಬಂದರು ಎಂದರೆ ಸರಿಯಲ್ಲ. ಸದರಿ ಆಯುಧಗಳನ್ನು ಸಾಂಕೇತಿಕವಾಗಿ ಮು.ಮಾ.1 ರಿಂದ 5 ಅಂತಾ ಗುರುತಿಸಲಾಯಿತು. ಆಗ ನಾವೆಲ್ಲ ಓಡಿ ಹೋದೆವು. ನನ್ನ ತಮ್ಮ ಅಶ್ರಪಅಲಿಗೆ ಈ ಮುಂಚೆ ಕಾಲಿಗೆ ಪೆಟ್ಟಾಗಿದ್ದರಿಂದ ಓಡಲಾಗದೇ ಆರೋಪಿತರ ಕೈಯಲ್ಲಿ ಸಿಕ್ಕಿಹಾಕಿಕೊಂಡ ಎಂದರೆ ಸರಿಯಲ್ಲ. ಆಗ ಆರೋಪಿತರೆಲ್ಲ ಸೇರಿ ಅವರಿಗೆ ಮನಸ್ಸಿಗೆ ಬಂದಂತೆ ಸದರಿ ಆಯುಧಗಳಿಂದ

ಆತನ ತಲೆ, ಬೆನ್ನು ಹಾಗೂ ಮೈಕೈ ಮೇಲೆಲ್ಲಾ ಹೊಡೆದು ಗಂಭೀರ ಸ್ವರೂಪದ ಗಾಯ ಪಡಿಸಿದರು ಎಂದರೆ ಸರಿಯಲ್ಲ. ಆಗ ರಾತ್ರಿ 08.20 ಗಂಟೆಯಾಗಿತ್ತು ಹಾಗೂ ಪುರಸಭೆಯ ಲೈಟ ಬೆಳಕು ಇತ್ತು ಎಂದರೆ ಸರಿಯಲ್ಲ. ನಂತರ ಆರೋಪಿತರೆಲ್ಲ ಮೋಟಾರಸೈಕಲಗಳನ್ನು ತೆಗೆದುಕೊಂಡು ಓಡಿ ಹೋದರು ಎಂದರೆ ಸರಿಯಲ್ಲ. ಅವರ ಕೈಗಳಲ್ಲಿದ್ದ ಆಯುಧಗಳನ್ನು ತೆಗೆದುಕೊಂಡು ಹೋದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ನನಗೀಗ ತೋರಿಸಿದ ಕೊಡಲಿ ಗುನ್ಹಾ ಸ್ಥಳದಲ್ಲಿ ಬಿದ್ದಿತ್ತು ಎಂದರೆ ಸರಿಯಲ್ಲ. ಸದರಿ ಕೊಡಲಿಯನ್ನು ಸಾಂಕೇತಿಕವಾಗಿ ಮು.ಮಾ. 6 ಅಂತಾ ಗುರುತಿಸಲಾಯಿತು. ನಂತರ ನಾನು ನನ್ನ ತಂದೆಯನ್ನು ಫೋನ ಮಾಡಿ ಕರೆಸಿಕೊಂಡು ನನ್ನ ತಮ್ಮನನ್ನು ಸಂಬಂಧಿಕರ ಸಹಾಯದಿಂದ ನಿಪ್ಪಾಣಿ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ, ಹೆಚ್ಚಿನ ಉಪಚಾರಕ್ಕೆ ಕೊಲಾಪೂರದ ಸಿ. ಪಿ. ಆರ್. ಆಸ್ಪತ್ರೆಗೆ ಕಳುಹಿಸಿ ಕೊಟ್ಟೆ ಎಂದರೆ ಸರಿಯಲ್ಲ. ನಂತರ ನಾನೇ ಠಾಣೆಗೆ ಹೋಗಿ ಸ್ವಂತ ಮಾಹಿತಿಯಂತೆ ನನಗೀಗ ವಿವರವಾಗಿ ಓದಿ ಹೇಳಲಾದ ನಿ.ಪಿ.1 ರಂತೆ ದೂರನ್ನು ನನ್ನ ಹಸ್ತಾಕ್ಷರದಲ್ಲಿಯೇ ಬರೆದು ಓದಿ ತಿಳಿದುಕೊಂಡು ಸಹಿ ಮಾಡಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

2) ದಿನಾಂಕಃ 03.10.2024 ರಂದು ಮಧ್ಯಾಹ್ನ 01.30 ರಿಂದ 03.30 ಗಂಟೆ ಸಮಯದಲ್ಲಿ ಪಂಚರಾದ ಚಾ.ಸಾ.4, 5 ರವರ ಸಮಕ್ಷಮ ನಾನೇ ಪೋಲಿಸರಿಗೆ ಆರೋಪಿತರು ನನ್ನ ತಮ್ಮನ ಮೇಲೆ ಹಲ್ಲೆ ಮಾಡಿದ ಸ್ಥಳ ತೋರಿಸಿದಾಗ ಪರಿಶೀಲನೆ ಮಾಡಿಕೊಂಡು ನನಗೀಗ ತೋರಿಸಿದ ನಿ.ಪಿ.3 ರಿಂದ 8 ಛಾಯಾಚಿತ್ರಗಳನ್ನು ತೆಗೆದುಕೊಂಡು ಪಂಚನಾಮೆ ಮಾಡಿಕೊಂಡರು ಎಂದರೆ ಸರಿಯಲ್ಲ. ಅದೇ ಕಾಲಕ್ಕೆ ನನಗೀಗ ತೋರಿಸಿದ ಮು.ಮಾ. 6 ಕೊಡಲಿಯನ್ನು ಜಪ್ತು ಮಾಡಿಕೊಂಡರು ಎಂದರೆ ಸರಿಯಲ್ಲ. ಅದೇ ಕಾಲಕ್ಕೆ ಸ್ಥಳದಲ್ಲಿ ಬಿದ್ದಿದ್ದ ರಕ್ತದ ಕಲೆಗಳನ್ನು, ರಕ್ತ ಹತ್ತಿದ

ಕೂದಲುಗಳನ್ನು ನನಗೀಗ ತೋರಿಸಿದಂತೆ ಜಪ್ತು ಮಾಡಿಕೊಂಡರು ಎಂದರೆ ಸರಿಯಲ್ಲ. ಸದರಿ ವಸ್ತುಗಳನ್ನು ಕಂಟ್ರೋಲ ಸ್ವಾಬ್ ಸಮೇತ ಸಾಂಕೇತಿಕವಾಗಿ ಮು.ಮಾ.7 ರಿಂದ 10 ಅಂತಾ ಗುರುತಿಸಲಾಯಿತು.

3) ಅದಾದ ನಂತರ ದಿನಾಂಕಃ 03.10.2024 ರಂದು ಠಾಣೆಗೆ ಹೋಗಿ ಘಟನೆ ಹಿನ್ನೆಲೆ ಕುರಿತು 3ನೇ ಅರೋಪಿಯಾದ ರವಿ ಶಿರಗಾಂವಿ ನನ್ನ ತಮ್ಮನಿಗೆ ನಿಪ್ಪಾಣಿಯ ಕೋಟಿವಾಲೆ ಕೂಟದಲ್ಲಿ ದುರ್ಗುಟ್ಟಿ ನೋಡಿದ್ದರಿಂದ ನನ್ನ ತಮ್ಮ ಹಾಗೂ ಆತನ ಮದ್ಯೆ ಜಗಳವಾಗಿತ್ತು ಹಾಗೂ ಒಬ್ಬ ಅಭಿಷೇಕ ದತ್ತವಾಡೆಯವರನ್ನು ನಾನು ಹಾಗೂ ನನ್ನ ತಮ್ಮ ಅಶ್ರಪಅಲಿ ಕೂಡಿ ಕೊಲೆ ಮಾಡಿದ್ದರಿಂದ ಆರೋಪಿತರು ನಮ್ಮ ಮೇಲೆ ಸಿಟ್ಟಾಗಿದ್ದರು ಎಂಬುದಾಗಿ, ಹಾಗೂ ನನ್ನ ತಮ್ಮ ಚಿಕಿತ್ಸೆ ಫಲಕಾರಿಯಾಗದೇ ಸಿ ಪಿ ಆರ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾಗಿ ನನಗೀಗ ವಿವರವಾಗಿ ಓದಿ ಹೇಳಲಾದ "ಈಗ ತಾವು ಓದಿ ................ ಮಾಡಿಸಿರುತ್ತೇನೆ" ಎಂಬುದಾಗಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿ.ಪಿ.9 ಎಂದು ಗುರುತಿಸಲಾಯಿತು.

4) ದಿನಾಂಕಃ 09.10.2024 ರಂದು ನಾನು ಮತ್ತೇ ಠಾಣೆಗೆ ಹಾಜರಾಗಿ 12, 13ನೇ ಆರೋಪಿತರು ನನ್ನ ತಮ್ಮನ ಚಲನ ವಲನ ಕುರಿತು ಉಳಿದ ಆರೋಪಿತರಿಗೆ ಮಾಹಿತಿ ಕೊಟ್ಟು ಗುನ್ನೆಯಲ್ಲಿ ಭಾಗಿಯಾಗಿದ್ದಾರೆಂದು ನನಗೀಗ ವಿವರವಾಗಿ ಓದಿ ಹೇಳಲಾದ "ಈಗ ತಾವು ................ ಈಗ ತಿಳಿಯಿತು" ಎಂಬುದಾಗಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿ.ಪಿ.10 ಎಂದು ಗುರುತಿಸಲಾಯಿತು.

5) ದಿನಾಂಕಃ 16.12.2024 ರಂದು ನಿಪ್ಪಾಣಿಯ ನ್ಯಾಯಾಧೀಶರ

ಮುಂದೆ ನನ್ನನ್ನು ಹಾಜರು ಪಡಿಸಿದಾಗ ನಾನೇ ಸ್ವಂತ ಮಾಹಿತಿ ಮೇರೆಗೆ ನನಗೀಗ ವಿವರವಾಗಿ ಓದಿ ಹೇಳಲಾದ ನಿ.ಪಿ.2 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

6) ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಈಗ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ– ಆರೋಪಿತರ ಪರ:– ಏನೂ ಇಲ್ಲ.**

**ಮರು ವಿಚಾರಣೆ** : ಇರುವುದಿಲ್ಲ.

(ಈ ಸಾಕ್ಷಿಯ ಸಾಕ್ಷ್ಯದ ಸಮಯದಲ್ಲಿ 1 ರಿಂದ 5, 7, 8 ನೇ ಆರೋಪಿತನನ್ನು ಕಾರಾಗೃಹದಿಂದ ವಿ.ಸಿ. ಮೂಲಕ ಹಾಜರಪಡಿಸಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.